**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 551/2020**

**ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ಆರೋಪಿ ಪರ ವಕೀಲರು ಶ್ರೀ ಕೆ. ಬಿ. ಇವರಿಂದ**

ಚಾಸಾಃ 1 ರವರು ನನ್ನ ಹೆಂಡತಿ ಎಂದರೆ ಸರಿ. 1 ರಿಂದ 12 ನೇ ಆರೋಪಿತರು ಒಂದೇ ಕುಟುಂಬಕ್ಕೆ ಸೇರಿದವರು ಇರುತ್ತಾರೆ ಎಂದರೆ ಸಾಕ್ಷಿಯು ಬೇರೆ-ಬೇರೆ ಇರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿತನ ಮಕ್ಕಳು 2 ರಿಂದ 5 ನೇ ಆರೋಪಿರು, 6 ನೇ ಆರೋಪಿತಳು ಹೆಂಡತಿ ಇರುತ್ತಾಳೆ, 7 ನೇ ಆರೋಪಿತಳು ಸೊಸೆ ಇರುತ್ತಾಳೆ ಎಂದರೆ ಸರಿ. ಸದರಿ 8 ರಿಂದ 12 ನೇ ಆರೋಪಿತರು 1 ನೇ ಆರೋಪಿತರ ಸಂಬಂಧಿಕರು ಎಂದರೆ ಸರಿ. ಸದರಿ ನಮ್ಮ ಮನೆ ಮತ್ತು ಆರೋಪಿತರ ಮನೆ ಬೇರೆ-ಬೇರೆ ಓಣಿಯಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಮತ್ತು 13 ಮತ್ತು 14 ನೇ ಆರೋಪಿತರ ಮನೆ ಅಕ್ಕ-ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಮನೆಯ ಮುಂದೇ ಸಿ.ಸಿ. ರೋಡು ಇದೆ ಎಂದರೆ ಸರಿ. ಸದರಿ ಸಿ.ಸಿ. ರೋಡಿನ ಎರಡೂ ಬದಿಯಲ್ಲಿ ಚರಂಡಿ ಇದೆ ಎಂದರೆ ಸರಿಯಲ್ಲ. ಸದರಿ ಚರಂಡಿ ಮುಚ್ಚಿ ನಾವು ಶೌಚಾಲಯ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 14 ನೇ ಆರೋಪಿತರ ಮನೆ ನಮ್ಮ ಮನೆಯಿಂದ ದೂರ ಇರುವುದರಿಂದ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಅನಂತಕುಮಾರ | ಫ಼ಾಸಾಃ 3 |
| ತಂದೆ/ಗಂಡನ ಹೆಸರುಃ | ಸಹಾದೇವಪ್ಪ | ಚಾಸಾಃ 6 |
| ವಯಸ್ಸು ಃ | 22 ವರ್ಷ | ದಿಃ 16-06-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

<u>ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನನಗೆ ಚಾಸಾಃ 1, 4, 5 ಮತ್ತು 7 ರಿಂದ 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ಸನಃ 2020 ರಲ್ಲಿ ನಮ್ಮ ಮನೆಯ ಬಚ್ಚಲು ನೀರು ಹೋಗಲು ಆರೋಪಿತರು ತಡೆದಿರುತ್ತಾರೆ. ಆಗ ಚಾಸಾಃ 4 ರವರು ಯಾಕೆ ನೀರನ್ನು ತಡೆದಿರುತ್ತೀರಿ ಎಂದು ಆರೋಪಿತರಿಗೆ ಕೇಳಿರುತ್ತಾರೆ. ಆವಾಗ ಆರೋಪಿತರು ಈ ಕಡೆಗೆ ನೀರು ಬಿಡಬಾರದು ಎಂದು ಹೇಳಿರುತ್ತಾರೆ. ಆಗ ನನ್ನ ತಂದೆ ಈ ಕಡೆಯಿಂದ ನೀರು ಕಳೆದ 20 ವರ್ಷಗಳಿಂದ ಹೋಗುತ್ತಿದ್ದು ಈಗ್ಯಾಕೆ ಹೋಗುವುದಿಲ್ಲ ಎಂದು ಕೇಳಿರುತ್ತಾರೆ. ಆಗ 2 ನೇ ಆರೋಪಿತನು ಚಾಸಾಃ 4 ರವರ ಅಂಗಿ ಹಿಡಿದು ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಮತ್ತು ಕಲ್ಲು ತೆಗೆದುಕೊಂಡು ನನ್ನ ತಂದೆಗೆ ಹೊಡೆದಿರುತ್ತಾನೆ. ಆಗ ಚಾಸಾಃ 5 ರವರು 2 ನೇ ಆರೋಪಿತನಿಗೆ ಕೇಳಿದಾಗ 2, 5, 8, 12 ನೇ ಆರೋಪಿತರು ಬಡಿಗೆಯಿಂದ ಮೊಳಕೈಗೆ ಮತ್ತು ಮೊಣಕಾಲಿಗೆ ಹೊಡೆದಿರುತ್ತಾರೆ. ಆಗ ನಾನು ವಿಚಾರಿಸಿದಾಗ ನನಗೆ 2, 4, 5 ಮತ್ತು 11 ನೇ ಆರೋಪಿತರು ಕೈ ಮುಷ್ಟಿ ಮಾಡಿ ಹೊಡೆದು ಕೆಳಗೆ ಹಾಕಿ ಒದ್ದಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾಃ 1 ನನ್ನ ತಾಯಿ ಜಗಳ ಬಿಡಿಸಲು ಬಂದಾಗ 6 ಮತ್ತು 7 ನೇ ಆರೋಪಿತಳು ನನ್ನ ತಾಯಿಗೆ ಹೊಡೆದಿರುತ್ತಾರೆ. ಮನೆಯ ಅಕ್ಕ-ಪಕ್ಕದವರು ಜಗಳ ಬಿಡಿಸಲು ಬಂದಾಗ ಎಲ್ಲಾ ಆರೋಪಿತರು ಅಕ್ರಮಕೂಟವನ್ನು ರಚಿಸಿಕೊಂಡು ಹೊಡೆದು ಹೋಗುವಾಗ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರ ವಿರುದ್ದ

ಪ್ರಕರಣವನ್ನು ದಾಖಲಿಸಿರುತ್ತೇವೆ. ಸದರಿ ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು. ಮಾ. 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ. ಬಿ. ಇವರಿಂದ**

1. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ 1 ರಿಂದ 12 ಮತ್ತು 13, 14 ನೇ ಆರೋಪಿತರ ಮನೆ ಬೇರೆ ಓಣಿಯಲ್ಲಿ ದೂರ ಇರುತ್ತದೆ ಎಂದರೆ ಸರಿ. ಚಾಸಾಃ 6 ರವರು ರಾಮಸಮುದ್ರ ಗ್ರಾಮದ ಅಧ್ಯಕ್ಷಳು ಇದ್ದಳು ಎಂದರೆ ಸರಿ. ಸದರಿ 13 ಮತ್ತು 14 ನೇ ಆರೋಪಿತರು ಸುಮಾರು ವರ್ಷಗಳಿಂದ ಬೆಂಗಳೂರಿನಲ್ಲಿ ದುಡಿಯಲು ಹೋಗಿದ್ದರು ಎಂದರೆ ಸರಿ. ಸದರಿ 13 ಮತ್ತು 14 ನೇ ಆರೋಪಿತರು ರಾಮಸಮುದ್ರ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ಇದ್ದಾರೆ ಎಂದರೆ ಸರಿ. ನಮ್ಮ ಬಚ್ಚಲು ನೀರು 13 ಮತ್ತು 14 ನೇ ಆರೋಪಿತರ ಮನೆಯ ಕಡೆ ಹೋಗುತ್ತವೆ ಎಂದರೆ ಸರಿ. ನನ್ನ ತಾಯಿ ಚಾಸಾಃ 1 ರವರು ಆಶಾ ಕಾರ್ಯಕರ್ತೆ ಇರುತ್ತಾರೆ ಎಂದರೆ ಸರಿ. 2 ನೇ ಆರೋಪಿತನ ಹೆಂಡತಿ ನಿರ್ಮಲಾ ನನಗೆ ಅಕ್ಕಳಾಗಬೇಕು ಎಂದರೆ ಸರಿ. ನಿರ್ಮಲಾ ತಂದೆ ಮತ್ತು ನನ್ನ ತಂದೆ ಖಾಸಾ ಸಹೋದರರು ಎಂದರೆ ಸರಿ. ನಿರ್ಮಲಾ ಇವರ ಮದುವೆ 2 ನೇ ಆರೋಪಿತನ ಜೊತೆ ಸನಃ 2007-2008 ರಲ್ಲಿ ಪ್ರೇಮ ವಿವಾಹ ಆಗಿರುತ್ತದೆ ಎಂದರೆ ಸರಿ.

2. ಸದರಿ ನಿರ್ಮಲಾ ಮದುವೆ ನನ್ನ ತಂದೆ-ತಾಯಿ ಮತ್ತು ನಿರ್ಮಲಾ ಇವರ ತಂದೆ-ತಾಯಿಗೆ ಇಷ್ಟ ಇರಲಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ಇಷ್ಟ ಇತ್ತು ಎಂದು ನುಡಿಯುತ್ತಾರೆ. ನಮ್ಮ ಬಚ್ಚಲು ನೀರು ಹೋಗುವ ಜಾಗದಲ್ಲಿ ಸಿ.ಸಿ ರೋಡು ಇದೆ ಎಂದರೆ ಸರಿ. ಸಿ.ಸಿ ರೋಡಿನ ಅಕ್ಕ-ಪಕ್ಕದ ಜಾಗದಲ್ಲಿ ಚರಂಡಿ ಇವೆ ಎಂದರೆ ಸಾಕ್ಷಿಯು ಒಂದೇ ಕಡೆಯಿದೆ ಎಂದು ನುಡಿಯುತ್ತಾರೆ. ಸದರಿ ಇನ್ನೊಂದು ಕಡೆಗೆ ಇರುವುದಿಲ್ಲ ಅದು ಬಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಚರಂಡಿ ಮೇಲೆ ನಾವು ಶೌಚಾಲಯವನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

3. ಸದರಿ ಮು. ಮಾ. 1 ರಿಂದ 3 ಗಳಿಂದ ಹೊಡೆಯುವಾಗ ಯಾರ ಕೈಯಲ್ಲಿ ಇತ್ತು ಎಂದರೆ ಸಾಕ್ಷಿಯು 8 ನೇ ಆರೋಪಿತನ ಕೈಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಸದರಿ ಮು. ಮಾ. 1 ರಿಂದ 3 ಜಗಳ ಕಾಲದಲ್ಲಿಯೇ ಉಪಯೋಗಿಸಿರುವ ಕಟ್ಟಿಗೆಗಳು ಎಂದು ನುಡಿಯುತ್ತಾರೆ. ಮು. ಮಾ. 1 ರಿಂದ 3 ರೈತರ ಮನೆಯಲ್ಲಿ ಒಲೆ ಉರಿಯಲು ಸಾಮಾನ್ಯವಾಗಿ ಇರುತ್ತವೆ ಎಂದರೆ ಸರಿ. ನನಗೆ ಪೋಲಿಸರು ಪೋಲಿಸ ಠಾಣೆಗೆ ಕರೆಸಿರುವುದಿಲ್ಲ. ನನ್ನ ಹೇಳಿಕೆಯನ್ನು ಪೊಲಿಸರು ಪಡೆದುಕೊಂಡಿರುತ್ತಾರೆ. ನಾನು ಹೇಳಿಕೆಯನ್ನು ಎಲ್ಲಿ ನೀಡಿರುತ್ತೇನೆ ಎಂಬುದರ ಬಗ್ಗೆ ಮಾಹಿತಿ ಇಲ್ಲ, ಸಾಕ್ಷಿಯು ಮುಂದುವರೆದು ನಾನು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ನರ್ಸ ಅಂತ ಕೆಲಸ ಮಾಡಿಕೊಂಡು ಉಪಜೀವನವನ್ನು ನಡೆಸುತ್ತಿದ್ದೇನೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ಹೇಳಿಕೆಯಲ್ಲಿ ಏನು ಬರೆಸಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ನನಗೆ ಇದೆ. ಸದರಿ ನನಗೆ ಓದಲು ಬರೆಯಲು ಬರದೇ ಇರುವುದರಿಂದ ಸದರಿ ಹೇಳಿಕೆಯಲ್ಲಿ ಏನು ಬರೆಸಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

4. ಚಾಸಾಃ 1, 4, 5 ಮತ್ತು ನಾನು ಮು. ಮಾ. ಗಳ ಅಳತೆ ಎಷ್ಟು ಇರುತ್ತದೆ ಎಂಬುದರ ಬಗ್ಗೆ ನಿಪಿ-1 ರಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ಚಾಸಾಃ 1 ರವರು ಕೆಲಸ ಮಾಡುವಾಗ 6 ನೇ ಆರೋಪಿತಳು ಅದ್ಯಕ್ಷ ಇರುವಾಗ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿ ನೋಟಿಸು ನೀಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿತನು ನನ್ನ ಸಹೋದರಿಯನ್ನು ಪ್ರೇಮ ವಿವಾಹವಾಗಿದ್ದರಿಂದ ಮತ್ತು 6 ನೇ ಆರೋಪಿತಳು ನನ್ನ ತಾಯಿಗೆ ನೋಟಿಸು ನೀಡಿದ್ದರಿಂದ ಆ ದ್ವೇಷದಿಂದ ನಾವು ಚಾಸಾಃ 1 ರವರ ಕಡೆಯಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಹೇಳಿಕೆಯ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸನಃ 2020 ರಲ್ಲಿ ಬಚ್ಚಲು ನೀರನ್ನು 3 ನೇ ಆರೋಪಿತನು ತಡೆದು ನಿಲ್ಲಿಸಿರುತ್ತಾನೆ. 3 ನೇ ಆರೋಪಿತನ ಮನೆ ನಮ್ಮ ಮನೆಯಿಂದ ಎರಡು ಮನೆ ಬಿಟ್ಟು ಇದೆ. 13 ಮತ್ತು 14 ನೇ ಆರೋಪಿತರ ಮನೆ ನಮ್ಮ ಮನೆಯ ಪಕ್ಕದಲ್ಲಿ

ಇರುತ್ತದೆ.  ಸದರಿ 3 ನೇ ಆರೋಪಿತನ ಮನೆ ಬೇರೆ ಓಣಿಯಲ್ಲಿ ಇರುವುದರಿಂದ ನಮ್ಮ ಬಚ್ಚಲು ನೀರನ್ನು ತಡೆದಿರುವುದಿಲ್ಲ ಎಂದರೆ ಸರಿಯಲ್ಲ.

5. ನಮ್ಮ ಮತ್ತು 13, 14 ನೇ ಆರೋಪಿತರ ನಡುವೆ ಬಚ್ಚಲು ನೀರು ಸಲುವಾಗಿ ತಂಟೆ-ತಕರಾರು ಆದಾಗ 6 ನೇ ಆರೋಪಿತಳು ಪಂಚಾಯಿತಿ ಕಡೆಯಿಂದ ಬಾಬುಗೌಡ ಮತ್ತು ಪಂಪ ಆಪರೇಟರ ಇವರನ್ನು ನ್ಯಾಯ ಪಂಚಾಯಿತಿ ಮಾಡಲು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಇದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ಕೂಡ ದ್ವೇಷದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**